ಹರಿಕಥಾಮೃತಸಾರ ಗುರುಗಳ ಕರುಣದಿಂದಾಪನಿತು ಕೇಳುವೆ
ಪರಮ ಭಗವದ್ಭಕ್ತರು ಇದನಾದರದಿ ಕೇಳುವುದು||

ಶ್ರೀರಮಣಿ ಕರಕಮಲ ಪೂಜಿತ ಚಾರುಚರಣ ಸರೋಜ
ಬ್ರಹ್ಮ ಸಮೀರವಾಣಿ ಫಣೀಂದ್ರವೀಂದ್ರ ಭವ ಇಂದ್ರ ಮುಖ ವಿನುತ
ನೀರಜಭವಾಂಡ ಉದಯ ಸ್ಥಿತಿ ಕಾರಣನೆ ಕೈವಲ್ಯದಾಯಕ
ನಾರಸಿಂಹನೆ ನಮಿಪೆ ಕರುಣಿಪುದು ಎಮಗೆ ಮಂಗಳವ||1||

ಜಗದುದರನ ಅತಿ ವಿಮಲ ಗುಣರೂಪಗಳನು ಆಲೋಚನದಿ
ಭಾರತ ನಿಗಮತತಿಗಳ ಅತಿಕ್ರಮಿಸಿ ಕ್ರಿಯಾ ವಿಶೇಷಗಳ
ಬಗೆಬಗೆಯ ನೂತನವ ಕಾಣುತ ಮಿಗೆ ಹರುಷದಿಂ ಪೊಗಳಿ ಹಿಗ್ಗುವ
ತ್ರಿಗುಣಮಾನಿ ಮಹಾಲಕುಮಿ ಸಂತೈಸಲಿ ಅನುದಿನವು||2||

ನಿರುಪಮಾನಂದಾತ್ಮ ಭವ ನಿರ್ಜರ ಸಭಾಸಂಸೇವ್ಯ
ಋಜುಗಣದ ಅರಸೆ ಸತ್ವಪ್ರಚುರ ವಾಣೀಮುಖಸರೋಜೇನ
ಗರುಡ ಶೇಷ ಶಶಾಂಕದಳ ಶೇಖರರ ಜನಕ ಜಗದ್ಗುರುವೇ
ತ್ವಚ್ಚರಣಗಳಿಗೆ ಅಭಿವಂದಿಸುವೆ ಪಾಲಿಪುದು ಸನ್ಮತಿಯ||3||

ಆರುಮೂರೆರೆಡೊಂದು ಸಾವಿರ ಮೂರೆರೆಡು ಶತಶ್ವಾಸ ಜಪಗಳ
ಮೂರು ವಿಧ ಜೀವರೊಳಗೆ ಅಬ್ಜಜಕಲ್ಪ ಪರಿಯಂತ ತಾ ರಚಿಸಿ
ಸತ್ವರಿಗೆ ಸುಖ ಸಂಸಾರ ಮಿಶ್ರರಿಗೆ ಅಧಮಜನರಿಗೆ
ಅಪಾರ ದುಃಖಗಳ ಈವ ಗುರು ಪವಮಾನ ಸಲಹೆಮ್ಮ||4||

ಚತುರವದನನ ರಾಣಿ ಅತಿರೋಹಿತ ವಿಮಲಾ ವಿಜ್ಞಾನಿ
ನಿಗಮ ಪ್ರತತಿಗಳಿಗಭಿಮಾನಿ ವೀಣಾಪಾಣಿ ಬ್ರಹ್ಮಾಣಿ
ನತಿಸಿ ಬೇಡುವೆ ಜನನಿ ಲಕ್ಷ್ಮೀಪತಿಯ ಗುಣಗಳ ತುತಿಪುದಕೆ
ಸನ್ಮತಿಯ ಪಾಲಿಸಿ ನೆಲೆಸು ನೀ ಮದ್ವದನ ಸದನದಲಿ||5||

ಕೃತಿರಮಣ ಪ್ರದ್ಯುಮ್ನನಂದನೆ ಚತುರವಿಂಶತಿ
ದೇವತೆಗಳಿಗೆ ಗುರುವೆನಿಸುತಿಹ ಮಾರುತನ ನಿಜಪತ್ನಿ
ಸತತ ಹರಿಯಲಿ ಗುರುಗಳಲಿ ಸದ್ಗತಿಯ ಪಾಲಿಸಿ
ಭಾಗವತ ಭಾರತ ಪುರಾಣ ರಹಸ್ಯ ತತ್ವಗಳು ಅರುಪು ಕರುಣದಲಿ ||6||

ವೇದಪೀಠ ವಿರಿಂಚಿ ಭವ ಶುಕ್ರ ಆದಿಸುರ ವಿಜ್ಞಾನದಾಯಕ
ಮೋದ ಚಿನ್ಮಯ ಗಾತ್ರ ಲೋಕಪವಿತ್ರ ಸುಚರಿತ್ರ
ಛೇದ ಭೇದ ವಿಷಾದ ಕುಟಿಲಾಂತಾದಿ ಮಧ್ಯ ವಿದೂರ
ಆದಾನಾದಿ ಕಾರಣ ಬಾದರಾಯಣ ಪಾಹಿ ಸತ್ರಾಣ||7||

ಕ್ಷಿತಿಯೊಳಗೆ ಮಣಿಮಂತ ಮೊದಲಾದ ಅತಿ ದುರಾತ್ಮರು
ಒಂದಧಿಕ ವಿಂಶತಿ ಕುಭಾಷ್ಯವ ರಚಿಸೆ
ನಡುಮನೆಯೆಂಬ ಬ್ರಾಹ್ಮಣನ ಸತಿಯ ಜಠರದೊಳು ಅವತರಿಸಿ ಭಾರತೀರಮಣ
ಮಧ್ವಭಿದಾನದಿ ಚತುರದಶ ಲೋಕದಲಿ ಮೆರೆದ ಅಪ್ರತಿಮಗೆ ವಂದಿಸುವೆ||8||

ಪಂಚಭೇದಾತ್ಮಕ ಪ್ರಪಂಚಕೆ ಪಂಚರೂಪಾತ್ಮಕನೆ ದೈವಕ
ಪಂಚಮುಖ ಶಕ್ರಾದಿಗಳು ಕಿಂಕರರು ಶ್ರೀಹರಿಗೆ
ಪಂಚವಿಂಶತಿ ತತ್ವ ತರತಮ ಪಂಚಿಕೆಗಳನು ಪೇಳ್ದ
ಭಾವೀ ವಿರಿಂಚಿಯೆನಿಪ ಆನಂದತೀರ್ಥರ ನೆನೆವೆನನುದಿನವು||9||

ವಾಮದೇವ ವಿರಿಂಚಿತನಯ ಉಮಾಮನೋಹರ ಉಗ್ರ ಧೂರ್ಜಟಿ
ಸಾಮಜಾಜಿನ ವಸನಭೂಷಣ ಸುಮನಸೋತ್ತಂಸ ಕಾಮಹರ ಕೈಲಾಸ ಮಂದಿರ
ಸೋಮಸೂರ್ಯಾನಲ ವಿಲೋಚನ
ಕಾಮಿತಪ್ರದ ಕರುಣಿಸೆಮಗೆ ಸದಾ ಸುಮಂಗಲವ||10||

ಕೃತ್ತಿವಾಸನೆ ಹಿಂದೆ ನೀ ನಾಲ್ವತ್ತು ಕಲ್ಪಸಮೀರನಲಿ ಶಿಷ್ಯತ್ವವಹಿಸಿ
ಅಖಿಳ ಆಗಮಾರ್ಥಗಳೋದಿ ಜಲಧಿಯೊಳು ಹತ್ತು ಕಲ್ಪದಿ ತಪವಗೈದು
ಆದಿತ್ಯರೊಳಗೆ ಉತ್ತಮನೆನಿಸಿ
ಪುರುಷೋತ್ತಮನ ಪರಿಯಂಕ ಪದವೈದಿದೆಯೋ ಮಹದೇವ||11||

ಪಾಕಶಾಸನ ಮುಖ್ಯ ಸಕಲ ದಿವೌಕಸರಿಗೆ ಅಭಿನಮಿಪೆ
ಋಷಿಗಳಿಗೆ ಏಕಚಿತ್ತದಿ ಪಿತೃಗಳಿಗೆ ಗಂಧರ್ವ ಕ್ಷಿತಿಪರಿಗೆ
ಆ ಕಮಲನಾಭದಿ ಯತಿಗಳಾನೀಕಕಾನಮಿಸುವೆನು ಬಿಡದೆ
ರಮಾಕಳತ್ರನ ದಾಸವರ್ಗಕೆ ನಮಿಪೆನು ಅನವರತ||12||

ಪರಿಮಳವು ಸುಮನದೊಳಗೆ ಅನಲನು ಅರಣಿಯೊಳಗೆ ಇಪ್ಪಂತೆ
ದಾಮೋದರನು ಬ್ರಹ್ಮಾದಿಗಳ ಮನದಲಿ ತೋರಿತೋರದಲೆ ಇರುತಿಹ

ಜಗನ್ನಾಥ ವಿಠಲನ ಕರುಣ ಪಡೆವ ಮುಮುಕ್ಷುಜೀವರು
ಪರಮ ಭಾಗವತರನು ಕೊಂಡಾಡುವುದು ಪ್ರತಿದಿನವು||13||

||ಇತಿ ಶ್ರೀ ಮಂಗಳಾಚರಣ ಸಂಧಿ ಸಂಪೂರ್ಣಂ||

ಜಯಗಳು ಆಗಲಿ ಅಪಜಯಗಳು ಹೋಗಲಿ

ಜಯದೇವೀ ರಮಣಾ ಒಲಿಯಲಿ ಕೋಲೇ
ಜಯದೇವೀ ರಮಣಾ ಒಲಿಯಲಿ ನಮ್ಮ
ವಿಜಯರಾಯರ ಕೀರ್ತಿ ಮೆರೆಯಲು ಕೋಲೆ
ದಸರಾಯರ ಕೀರ್ತಿ ಮೆರೆಯಲು ಕೋಲೆ

ಹರಿಯೇ ಸರ್ವೋತ್ತಮ ಹರಿಯೇ ಪರದೇವತೆ
ಹರಿದಾಸರೆಂಬೋ ಬಿರುದಿನ ಕೋಲೆ
ಹರಿದಾಸರೆಂಬೋ ಬಿರುದಿನ ಹೆಕ್ಕಾಲೆ
ಹಿರಿಬಾಗಿಲೊಳಗೆ ನುಡಿಸೇವು ಕೋಲೆ

ಪನ್ನಂಗ ಶಯನ ಸುಪರ್ಣ ವಾಹನ
ಸುಪರ್ಣ ವಾಹನ ಸುಖಪೂರ್ಣ ಕೋಲೆ
ಸುಪರ್ಣ ವಾಹನ ಸುಖಪೂರ್ಣನಾದ
ಮೋಹನ ವಿಠ್ಠಲ ಕರುಣಿಸು ಕೋಲೆ ||

ಕೋಲು ಕೋಲೆ ರಂಗ ಕೋಲು ಕೋಲೆ
ಕೋಲು ಕೋಲೆ ಕೃಷ್ಣ ಕೊಲು ಕೊಲೆ ||

ರಚನೆ : ಶ್ರೀಶವಿಠ್ಠಲ
ರಾಗ : ಶಂಕರಾಭರಣ (೨೯) ಮಾಂಡ್
ತಾಳ :

ಗುರು ಮಧ್ವರಾಯರಿಗೆ ನಮೋ ನಮೋ । ನಮ್ಮ
ಗುರು ಜಯರಾಯರಿಗೆ ನಮೋ ನಮೋ ॥ ಪ ॥

ಶ್ರೀಪಾದರಾಜರಿಗೆ ಗುರುವ್ಯಾಸರಾಜರಿಗೆ ।
ಗುರುವಾದಿರಾಜರಿಗೆ ನಮೋ ನಮೋ ॥ ೧ ॥

ರಾಘವೇಂದ್ರರಾಯರಿಗೆ ವೈಕುಂಠದಾಸರಿಗೆ।
ಪುರುಂದರದಾಸರಿಗೆ ನಮೋ ನಮೋ ॥ ೨ ॥

ಗುರು ವಿಜಯದಾಸರಿಗೆ ಭಾಗಣ್ಣದಾಸರಿಗೆ ।
ಶ್ರೀರಂಗವಲಿದ ದಾಸರಿಗೆ ನಮೋ ನಮೋ ॥ ೩ ॥

ಪರಮ ವೈರಾಗ್ಯಶಾಲಿ ತಿಮ್ಮಣ್ಣದಾಸರಿಗೆ ।
ಹುಂಡೇಕಾರ ದಾಸರಿಗೆ ನಮೋ ನಮೋ ॥ ೪ ॥

ಗುರು **ಶ್ರೀಶವಿಠಲನ** ಪರಮ ಭಕ್ತರ ಚರಣ ।
ಸರಸಿಜಯುಗಗಳಿಗೆ ನಮೋ ನಮೋ ॥ ೫ ॥

ಗುರುಮಧ್ವರಾಯರಿಗೆ ನಮೋ ನಮೋ ।
ಗುರುಮಧ್ವ ಸಂತತಿಗೆ ನಮೋ ನಮೋ ॥ ಪ ॥

ರಾಘವೇಂದ್ರ ಗುರುರಾಯರ ಸೇವಿಸಿರೊ ಸೌಖ್ಯದಿ ಜೀವಿಸಿರೊ ||pa||

ವಾಸೋತ್ತುಂಗಾ ತೀರದಲ್ಲೆ ನಿಂತು ವಸುಧೆಯೊಳು ಬಂದು ||a.pa||

ಆ ಸುಧೀಂದ್ರ ಕರ ಸರೋಜ ಸಂಜಾತ ವಸುಧೆಯೊಳು ಪುನೀತಾ
ದಾಶರಥಿಯ ದಾಸತ್ವವ ತಾನೂಹಿಸಿ ದುರ್ಮತಿಗಳ ಜಯಿಸಿ ತ್ಯಜಿಸಿ
ಈ ಸಮೀರಮತ ಸಂಸ್ಥಾಪಕರಾಗಿ ನಿಂದಕರನು ನೀಗಿ ಭೂಸುರರಿಗೆ
ಸಂಸೇವಸಹಾಚರಣೀ ಕಂಗೊಳಿಸುವ ಕರುಣಿ ||1||

ಕುಂದದೆ ವರ ಮಂತ್ರಾಲಯದಲ್ಲಿರುವಾ ಕರೆದಲ್ಲಿಗೆ ಬರುವಾ
ಸಂದರುಶನದಿಂದಲಿ ಮಹತ್ಪಾಪ ಪರಿದೋಡಿಸಲಾಪಾ
ವೃಂದಾವನ ಮೃತ್ತಿಕೆ ಜಲಪಾನ ಮುಕ್ತಿಗೆ ಸೋಪಾನ
ಮಂದ ಭಾಗ್ಯರಿಗೆ ದೊರೆಯದಿವರ ಸೇವಾ ಶರಣರ ಸಂಜೀವಾ ||2||

ಶ್ರೀದವಿಠ್ಠಲನ ಸನ್ನಿಧಾನ ಪಾತ್ರಾ ಸಂಸ್ತುತಿಸಿದ ಮಾತ್ರಾ
ಮೋದಬಡಿಸುವ ತಾನಿಹಪರದಲ್ಲಿ ಈತಗೆ ಸಮರೆಲ್ಲಿ
ಮೇದಿನಿಯೊಳಗಿನ್ನರಸಲು ಕಾಣೆ ಪುಸಿಯಿಲ್ಲೆನ್ನಾಣೆ
ಪಾದಸ್ಮರಣೆ ಮಾಡದವನೆ ಪಾಪಿ ನಾ ಪೇಳ್ವೆನು||3||

ಸತತ ಗಣನಾಥ ಸಿದ್ಧಿಯನೀವ ಕಾರ್ಯದಲಿ
ಮತಿ ಪ್ರೇರಿಸುವಳು ಪಾರ್ವತೀದೇವಿ ಮು-
ಕುತಿಪಥಕೆ ಮನವೀವ ಮಹರುದ್ರದೇವರು ಹರಿ ಭ-
ಕುತಿದಾಯಕಳು ಭಾರತೀದೇವಿ ಯು-
ಕುತಿ  ಶಾಸ್ತ್ರಗಳಲ್ಲಿ ವನಜಸಂಭವನರಸಿ
ಸತ್ಕರ್ಮಗಳ ನಡೆಸಿ ಸುಜ್ಞಾನ ಮತಿಯಿತ್ತು
ಗತಿ ಪಾಲಿಸುವ ನಮ್ಮ ಪವಮಾನನು
ಚಿತ್ತದಲಿ ಆನಂದ ಸುಖವನೀವಳು ರಮಾ ಭ-
ಕುತಜನರೊಡೆಯ ನಮ್ಮ ಪುರಂದರವಿಟ್ಠಲನು
ಸತತ ಇವರೊಳು ನಿಂತು ಈ ಕೃತಿಯ ನಡೆಸುವನು |

ಸತ್ಯಂ ಜಗತಿದು ಪಂಚ ಭೇದವು । ನಿತ್ಯ ಶ್ರೀ ಗೋವಿಂದನ ।
ಕೃತ್ಯವರಿತು ತಾರತಮ್ಯದಿ ಕೃಷ್ಣನಧಿಕೆಂದು ಸಾರಿರೈ ॥ ಪ ॥

ಜೀವ ಈಶಗೆ ಭೇದ ಸರ್ವತ್ರ ಜೀವ ಜೀವಕೆ ಭೇದವು ।
ಜೀವ ಜಡ ಜಡಕೆ ಭೇದ । ಜೀವ ಜಡ ಪರಮಾತ್ಮಗೆ ॥ ೧ ॥

ಮಾನುಷೋತ್ತುಮಗಧಿಕ ಕ್ಷಿತಿಪರು ಮನುಜ ದೇವ ಗಂಧರ್ವರು ।
ಜ್ಞಾನ ಪಿತ್ರಾ ಅಜಾನ ಕರ್ಮಜ ದಾನವಾರಿ ತತ್ವಾತ್ಮರು ॥ ೨ ॥

ಗಣಪ ಮಿತ್ರರು ಸಪ್ತುಋಷಿಗಳು ವಹ್ನಿ ನಾರದ ವರುಣರು ।
ಇನಜಗೆ ಸಮ ಚಂದ್ರ ಸೂರ್ಯರು ಮನು ಸತಿಯು ಹೆಚ್ಚು ಪ್ರವಹನು ॥ ೩
॥

ದಕ್ಷ ಸಮ ಅನಿರುದ್ಧ ಗುರು ಶಚಿ ರತಿ ಸ್ವಾಯಂಭುವರಾರ್ವರೂ ।
ಪಕ್ಷ ಪ್ರಾಣನಿಗಿಂತ ಕಾಮನು ಕಿಂಚಿತಧಿಕನು ಇಂದ್ರನು ॥ ೫ ॥

ದೇವೇಂದ್ರನಿಗಿಂತ ಅಧಿಕ ಮಹರುದ್ರ ಸಮ ಶೇಷ ಗರುಡರು ।
ಕೇವಲಧಿಕರು ಶೇಷ ಗರುಡಗೆ ದೇವಿ ಭಾರತಿ ಸರಸ್ವತಿ ॥ ೬ ॥

ವಾಯುವಿಗೆ ಸಮರಿಲ್ಲ ಜಗದೊಳು ವಾಯು ದೇವರೇ ಬ್ರಹ್ಮರು ।
ವಾಯು ಬ್ರಹ್ಮಗೆ ಕೋಟಿ ಗುಣದಿಂದಾ ಅಧಿಕ ಶಕ್ತಳು ಶ್ರೀರಮಾ ॥ ೭ ॥

ಅನಂತ ಗುಣದಿಂದ ಲಕುಮಿಗಧಿಕನು ಶ್ರೀಪುರುಂದರವಿಠ್ಠಲನು ।

ಘನ ಸಮರು ಇವಗಿಲ್ಲ ಜಗದೊಳು ಹನುಮ ಹೃತ್ಪದ್ಮವಾಸಿಗೆ ॥ ೮ ॥

ಮೋದಲ್ ವಂದಿಪೇ ನಿನಗೇ ಗನನಥ ..ಪ್.ಅ..

ಬಂದ ವಿಗ್ನ ಕಲೇಯೋ ಗನನಥ ..

ಮೋದಲ್ ವಂದಿಪೇ ನಿನಗೇ ಗನನಥ ..

ಹಿಂದೇ ರವನನು ಮದದಿಂದ ನಿನ್ನ ಪುಜಿಸದೇ ..

ಸಂದ ರನದಲ್ಲಿ ಗನನಥ ..

ಮಧವನ ಅಗ್ನೇಯಿಂದ ಧರ್ಮರಯ ಪೋಓಜಿಸಲು ..

ಸಧಿಸಿದ ರಅಜ್ಯ ಗನನಥ ..

ಮನ್ಗಲ ಮುರುತಿ ಗುರು ರನ್ಗ ವಿಥಲನ ಪದ ..

ಹಿನ್ಗದೇ ಪಲಿಸೋ ಗನನಥ ..

ಆ ಪ-ರಂತಪ -- ನೊಲುಮೆ-ಯಿಂದ ಸ- ।
ದಾಪ-ರೋಕ್ಷಿಗ -- ಳೆನಿಸಿ- ಭಗವ- ।
ದ್ರೂಪ- ಗುಣಗಳ -- ಮಹಿಮೆ- ಸ್ವಪತಿಗ -- ಳಾನ-ನದಿ ತಿಳಿ-ವ ॥
ಸೌಪ-ರಣಿ ವಾ -- ರುಣಿ ನ-ಗಾತ್ಮಜ- ।
ರಾಪ-ನಿತು ಬ -- ಣ್ಣಿಸುವೆ- ಎನ್ನ ಮ- ।
ಹಾಪ-ರಾಧಗ -- ಳೆಣಿಸ-ದೀಯಲಿ -- ಪರಮ- ಮಂಗಳ-ವ ॥ ೩೨-೧೫ ॥

ನಮಃ ಪಾರ್ವತೀ ಪತಿ ನುತಜನಪರ ನಮೊ ನಮೋ ವಿರೂಪಾಕ್ಷ
ರಮಾರಮಣನಲ್ಲಮಲಭಕುತಿ ಕೊಡು ನಮೋ ವಿಶಾಲಾಕ್ಷ
ನೀಲಕಂಠ ತ್ರಿಶೂಲ ಡಮರು ಹಸ್ತಾಲಂಕೃತರಕ್ಷ
ಫಾಲನೇತ್ರ ಕಪಾಲ ರುಂಡಮಣಿ ಮಾಲಾ ಧೃತ ವಕ್ಷ
ಶೀಲರಮ್ಯ ವಿಶಾಲ ಸುಗುಣ ಸಲ್ಲೀಲ ಸುರಾಧ್ಯಕ್ಷ
ಶ್ರೀಲಕುಮೀಶನ ಓಲೈಸುವ ಭಕ್ತಾವಳಿಗಳ ಪಕ್ಷ

ವಾಸವನುತ ಹರಿದಾಸ ಈಶ ಕೈಲಾಸ ವಾಸ ದೇವ
ದಾಶರಥಿಯ ಔಪಾಸಕ ಸುಜನರ ಪೋಷಿಪ ಪ್ರಭಾವ
ಭಾಸಿಸುತಿಹುದು ಅಶೇಷ ಜೀವರಿಗೆ ಈಶನೆಂಬ ಭಾವ
ಶ್ರೀಶನಲ್ಲಿ ಕೀಲಿಸು ಮನವ ಗಿರಿಜೇಶ ಮಹಾದೇವ

ಮೃತ್ಯುಂಜಯ ನಿನ್ನುತ್ತಮ ಪದಯುಗ ಭೃತ್ಯನೋ ಸರ್ವತ್ರ
ಹತ್ತಿರ ಕರೆದು ಅಪತ್ಯನಂತೆ ಪೊರೆಯುತ್ತಿರೋ ತ್ರಿನೇತ್ರ
ತೆತ್ತಿಗನಂತೆ ಕಾಯುತ್ತಿಹೆ ಬಾಣನ ಸತ್ಯದಿ ಸುಚರಿತ್ರ
ಕರ್ತೃ ಉಡುಪಿ ಸರ್ವೋತ್ತಮ ಕೃಷ್ಣನ ಪೌತ್ರ ಕೃಪಾ ಪಾತ್ರ

ಕೃತಿರಮಣ ಪ್ರದ್ಯುಮ್ನನಂದನೆ ಚತುರವಿಂಶತಿ
ದೇವತೆಗಳಿಗೆ ಗುರುವೆನಿಸುತಿಹ ಮಾರುತನ ನಿಜಪತ್ನಿ
ಸತತ ಹರಿಯಲಿ ಗುರುಗಳಲಿ ಸದ್ಗತಿಯ ಪಾಲಿಸಿ
ಭಾಗವತ ಭಾರತ ಪುರಾಣ ರಹಸ್ಯ ತತ್ವಗಳು ಅರುಪು ಕರುಣದಲಿ

ಚತುರವದನನ ರಾಣಿ ಅತಿರೋಹಿತ ವಿಮಲಾ ವಿಜ್ಞಾನಿ
ನಿಗಮ ಪ್ರತತಿಗಳಿಗಭಿಮಾನಿ ವೀಣಾಪಾಣಿ ಬ್ರಹ್ಮಾಣಿ
ನತಿಸಿ ಬೇಡುವೆ ಜನನಿ ಲಕ್ಷ್ಮೀಪತಿಯ ಗುಣಗಳ ತುತಿಪುದಕೆ
ಸನ್ಮತಿಯ ಪಾಲಿಸಿ ನೆಲೆಸು ನೀ ಮದ್ವದನ ಸದನದಲಿ

## **ಪವಮಾನ ಪವಮಾನ**

ಪವಮಾನ ಪವಮಾನ ಜಗದಾ ಪ್ರಾಣಾ

ಸಂಕರುಷಣ ಭವಭಯಾರಣ್ಯ ದಹನ |ಪ|

ಶ್ರವಣವೆ ಮೊದಲಾದ ನವವಿಧ ಭಕುತಿಯ

ತವಕದಿಂದಲಿ ಕೊಡು ಕವಿಗಳ ಪ್ರಿಯ ||ಅ ಪ||

ಹೇಮ ಕಚ್ಚುಟ ಉಪವೀತ ಧರಿಪ ಮಾರುತ ಕಾಮಾದಿ ವರ್ಗ ರಹಿತ

ವ್ಯೋಮಾದಿ ಸರ್ವವ್ಯಾಪುತ ಸತತ ನಿರ್ಭೀತ ರಾಮಚಂದ್ರನ ನಿಜದೂತ

ಯಾಮ ಯಾಮಕೆ ನಿನ್ನಾರಾಧಿಪುದಕೆ

ಕಾಮಿಪೆ ಎನಗಿದು ನೇಮಿಸಿ ಪ್ರತಿದಿನ

ಈ ಮನಸಿಗೆ ಸುಖಸ್ತೋಮವ ತೋರುತ

ಪಾಮರ ಮತಿಯನು ನೀ ಮಾಣಿಪುದು |೧|

ವಜ್ರ ಶರೀರ ಗಂಭೀರ ಮುಕುಟಧರ ದುರ್ಜನವನ ಕುಠಾರ

ನಿರ್ಜರ ಮಣಿದಯಾ ಪಾರ ವಾರ ಉದಾರ ಸಜ್ಜನರಘವ ಪರಿಹಾರ

ಅರ್ಜುನಗೊಲಿದಂದು ಧ್ವಜವಾನಿಸಿ ನಿಂದು

ಮೂರ್ಜಗವರಿವಂತೆ ಗರ್ಜನೆ ಮಾಡಿದಿ

ಹೆಜ್ಜೆ ಹೆಜ್ಜೆಗೆ ನಿನ್ನ ಅಬ್ಜ ಪಾದದ ಧೂಳಿ

ಮಾರ್ಜನದಲಿ ಭವ ವರ್ಜಿತನೆನಿಸೊ |೨|

ಪ್ರಾಣ ಅಪಾನ ವ್ಯಾನೋದಾನ ಸಮಾನ ಆನಂದ ಭಾರತಿ ರಮಣ

ನೀನೆ ಶರ್ವಾದಿ ಗೀರ್ವಾಣಾದ್ಯಮರರಿಗೆ ಜ್ಞಾನಧನ ಪಾಲಿಪ ವರೇಣ್ಯ

ನಾನು ನಿರುತದಲಿ ಏನೇನೆಸಗಿದೆ

ಮಾನಸಾದಿ ಕರ್ಮ ನಿನಗೊಪ್ಪಿಸಿದೆನೊ

ಪ್ರಾಣನಾಥ ಸಿರಿವಿಜಯವಿಠಲನ

ಕಾಣಿಸಿ ಕೊಡುವದು ಭಾನು ಪ್ರಕಾಶ |೩|

<u>**ವೀರ ಹನುಮ ಬಹು ಪರಾಕ್ರಮ**</u>

ವೀರ ಹನುಮ ಬಹು ಪರಾಕ್ರಮ ||ಪ||

ಸಜ್ಞಾನವಿತ್ತು ಪಾಲಿಸೆನ್ನ ಜೀವರೋತ್ತಮ ||ಅ.ಪ||

ರಾಮ ದೂತನೆನಿಸಿ ಕೊಂಡೆ ನೀ, ರಾಕ್ಷಸರ

ವನವನೆಲ್ಲ ಕಿತ್ತು ಬಂದೆ ನೀ

ಜಾನಕಿಗೆ ಮುದ್ರೆಯಿತ್ತು ಜಗತಿಗೆಲ್ಲ ಹರ್ಷವಿತ್ತು

ಚೂಡಾಮಣಿಯ ರಾಮಗಿತ್ತು ಲೋಕಕೆ ಮುದ್ದೆನಿಸಿ ಮೆರೆವ

ಗೋಪಿಸುತನ ಪಾದ ಪೂಜಿಸಿ , ಗದೆಯ ಧರಿಸಿ

ಬಕಾಸುರನ ಸಂಹರಿಸಿದೆ

ದ್ರೌಪದಿಯ ಮೊರೆಯ ಕೇಳಿ ಮತ್ತೆ ಕೀಚಕನ್ನ ಕೊಂದು

ಭೀಮನೆಂಬ ನಾಮ ಧರಿಸಿ ಸಂಗ್ರಾಮ ಧೀರನಾಗಿ ಜಗದಿ

ಮಧ್ಯಗೇಹನಲ್ಲಿ ಜನಿಸಿ ನೀ ಬಾಲ್ಯದಲ್ಲಿ

ಮಸ್ಕರೀಯ ರೂಪಗೊಂಡೆ ನೀ

ಸತ್ಯವತಿಯ ಸುತನ ಭಜಿಸಿ ಸನ್ಮುಖದಿ ಭಾಷ್ಯ ಮಾಡಿ

ಸಜ್ಜನರ ಪೊರೆವ ಮುದ್ದು ಪುರಂದರವಿಠಲನ ದಾಸ

## ಹೊಸ ಕಣ್ಣು ಎನಗೆ ಹಚ್ಚಲೇಬೇಕು

ಹೊಸ ಕಣ್ಣು ಎನಗೆ ಹಚ್ಚಲೇಬೇಕು ಜಗದಂಬ ವಸುದೇವಸುತನ ಕಾಂಬುದಕೆ
ಘಸಣೆಯಾಗಿದೆ ಭವವಿಷಯವಾರಿಧಿಯೊಳು ಶಶಿಮುಖಿ ಕರುಣದಿ ಕಾಯೇ..... ಅಮಾ

ಪರರ ಅನ್ನವನುಂಡು ಪರರ ಧನವಕಂಡು ಪರಿಪರಿ ಕ್ಲೇಶಗಳುಂಡು ವರಮಹಾಲಕುಮಿ ನಿನ್ನ ಚರಣಕ್ಕೆ ಮೊರೆಹೊಕ್ಕೆ ಕರುಣದಿ ಕಣ್ಣೆತ್ತಿ ನೋಡೆ..... ಅಮ್ಮಾ

ಮಂದಹಾಸಿನಿ ಭವಸಿಂಧುವಿನೊಳಗಿಟ್ಟು ಚಂದವೆ ಅಮ್ಮಾ ನೋಡುವುದು ಕಂದನಂತೆಂದೆನ್ನ ಕುಂದುಗಳೆಣಿಸದೆ ಮಂಧರೊದ್ದರನ ತೋರಮ್ಮ..... ಅಮ್ಮಾ

ಅಂದಚಂದಗಳೊಲ್ಲೆ ಬಂಧುಬಳಗವೊಲ್ಲೆ ಬಂಧನಕೆಲ್ಲ ಕಾರಣವು ಇಂದಿರೇಶನ ಪಾದದ್ವಂದ್ವವ ತೋರಿ ಹೃನ್ಮಂದಿರದೊಳು ಬಂದು ನಿಲ್ಲೇ.... ಅಮ್ಮಾ

**ಜಯ ಕೊಲಹಪುರ ನಿಲಯೆ**

ಜಯ ಕೊಲಹಪುರ ನಿಲಯೆ ಬಜದಹಿಸಹತೆತರವಿಲಯೆ
ತವ ಪದು ಹರಿದಿ ಕಲಯೆ ರತನ ರcಹಿತವಲೆಯೆ||

ಜಯ ಜಯ ಸಗರಜತೆ ಕುರು ಕರುನ ಮಯಿ ಬಹಿತೆ
ಜಗದಮಬಬಹಿದಹಯ ತೆ ಜಿವತಿ ತವ ಪೊತೆ||1||

ಜಯ ಜಯ ಸಗರ ಸದನ ಜಯ ಕನತಯ ಜಿತಮದನ
ಜಯ ದುಸಹತನತಕ ಕದನ ಕುನದಮುಕುಲ ರದನ||2||
ಸುರಮನಿ ನುತ cಹರನೆ ಸುಮನಹ ಸನಕತ ಹರನೆ
ಸುಸವರ ರನಜಿತ ವಿನೆ ಸುನದರಿ ನಿಜ ಕಿರನೆ||3||
ಬಹಜದಿನದಿವರ ಸೊಮ ಬಹವಮುಕಹಯಮರಕಮ
ಬಹಯಮುಲಲಿವಿರಮ ಬಹನಜಿತ ಮುನಿಬಹಿಮ||4||
ಕುಮಕುಮ ರನಜಿತಫ಼ಲೆ ಕುನಜರ ಬನದವಲೊಲೆ
ಕಲದಹುತಮಲcಹಿಲೆ ಕರಿನತಕುಜನಜಲೆ||5||

ದಹರಿತಕರುನ ರಸ ಪುರೆ ದಹನದನೊತಸವ ದಹಿರೆ
ದಹವನಿಲವನಿನದಿತಕಿರೆ ದಹಿರೆ ದನುಜದರೆ||6||
ಸುರಹರುತಪನಜರಕಿರ ಸುಮಗೆಹರಪಿತಹರ
ಸುನದರ ಕುನಜವಿಹರ ಸುರ ಪರಿವರ||7||
ವರಕಬರಿದಹರಿತಕುಸುಮೆ ವರಕನಕದಹಿಕಸುಸಹುಮೆ
ವನನಿಲಯದಯ ಬಹಿಮೆ ವದನ ವಿಜಿತ ಸೊಮೆ||8||
ಮದಕಲಬಹಲಸಗಮನೆ ಮದಹುಮತಹನಲಸ ನಯನೆ
ಮರುದುಲೊಲಲಕರcಹರನೆ ಮದಹುರ ಸರಸ ಗನೆ||9||
ವಯಗರಪುರಿವರ ನಿಲಯೆ ವಯಸಪದರಪಿತ ಹರುದಯೆ
ಕುರು ಕರುನ ಮಯಿ ಸದಯೆ ವಿವಿದ ನಿಗಮ ಗೆಯೆ||10||